**ಸೋಷಿಯಲ್ ಮೀಡಿಯಾ ಮತ್ತು ಆ್ಯಪ್‌ಗಳ ಕ್ಷಿಪ್ರಕ್ರಾಂತಿ ಜನಪ್ರಿಯತೆಯಲ್ಲಿ ಅಷ್ಟೇ ಅಲ್ಲ, ಪರಿಣಾಮದಲ್ಲಿಯೂ ಬಹಳ ದೊಡ್ಡದು. ಈ ಕಾಲದ ಸಂವಹನ ಪರಿಕರಗಳು 'ಪ್ರೇಮ'ವನ್ನು ಪ್ರೇಮದ ಸ್ವರೂಪವನ್ನೂ ಬದಲಿಸಿವೆಯೇ?**



### ಫೇಸ್‌ಬುಕ್ ಲವ್

ಬಿಡಿ, ಪುರಾಣದ ಕತೆಯನ್ನು ಅತ್ತಲಿಟ್ಟು ಪ್ರಚಲಿತಕ್ಕೆ ಬರೋಣ. 2000ದಿಂದ ಈಚೆಗೆ ಟೀನೇಜು ಜಗತ್ತಿಗೆ ಕಾಲಿಟ್ಟವರನ್ನು, ಪ್ರೇಮಮಹಲಿನ ಬಾಗಿಲ ತಟ್ಟಿದವರನ್ನೊಬ್ಬ ತಡವಿ ನೋಡಿ. 'ನೀವಿಬ್ಬರೂ ಮೊದಲು ಭೇಟಿಯಾಗಿದ್ದು ಎಲ್ಲಿ?' ಈ ಪ್ರಶ್ನೆಗೆ ಬಹುತೇಕರ ಉತ್ತರ 'ಫೇಸ್‌ಬುಕ್' ಎಂದೇ ಆಗಿರುತ್ತದೆ. ಪತ್ರದ ಪರಿಚಯವೇ ಇಲ್ಲದ ಪ್ರೇಮದ ಜಮಾನಾ ಅವರದ್ದು.


### ಬದಲಾಗಿದೆ ಜಗ; ಭೇಟಿಯ ಜಾಗ!

ಮೊದಲಾದರೆ ಊರ ಜಾತ್ರೆ, ಗೆಳೆಯ/ತಿ ಮದುವೆ, ಕಾಲೇಜು, ಕಾಲೇಜು ಟ್ರಿಪ್ಪು ಇವೆಲ್ಲವೂ ಪ್ರೇಮ ಮೊಳಕೆ ಒಡೆಯುವ ಜಾಗಗಳಾಗಿದ್ದವು. ಆದರೆ ಆ ಜಾಗಗಳೆಲ್ಲ ಈಗ ಹಿನ್ನೆಲೆಗೆ ಸರಿದು ವರ್ಚುವಲ್ ಜಗತ್ತೊಂದು ಮೈದಾಳಿದೆ. ಈ ಜಗತ್ತಿನಲ್ಲಿ ಪ್ರೊಫೈಲ್ ಫೋಟೊಗಳೇ ಆಕರ್ಷಣೆಯ ಕೇಂದ್ರಗಳು, ಮೆಸೆಂಜರೇ ಅಂಚೆ, ವಾಟ್ಸ್‌ಆ್ಯಪ್ ನಂಬರ್ ಸಿಕ್ಕಮೇಲಂತೂ ಕ್ಷಣಕ್ಷಣವೂ ಮಾತುಗಳ ವಿನಿಮಯವೇ. ವಿಡಿಯೊಕಾಲ್ ಬಂದಮೇಲಂತೂ ನೆನೆದವರು ಮನದಲ್ಲಿ ಎಂಬ ಮಾತು ಬದಲಾಗಿ 'ನೆನೆದವರು ಮೊಬೈಲ್‌ನಲ್ಲಿ' ಎಂದಾಗಿಬಿಟ್ಟಿದೆ!

ಪತ್ರದ ಕಾಲ ಬಹುತೇಕ ಮುಗಿದಿದೆ. 'ಮೊದಲ ದಿನ ಮೌನ ಅಳುವೇ ತುಟಿಗೆ ಬಂದಂತೆ / ಚಿಂತೆ ಬಿಡಿ ಹೂವ ಮುಡಿದಂತೆ / ಹತ್ತುಕಡೆ ಕಣ್ಣು ಸಣ್ಣಗೆ ದೀಪ ಉರಿದಂತೆ / ಜೀವದಲಿ ಜಾತ್ರೆ ಮುಗಿದಂತೆ' ಎಂಬ ನರಸಿಂಹಸ್ವಾಮಿ ಅವರ ಪದ್ಯ ಭಾವಗೀತೆಯಾಗಿ ಉಳಿದಿದೆಯೇ ಹೊರತು ಹೊಸಕಾಲದ 'ಭವಗೀತೆ'ಯಂತೂ ಆಗಿಲ್ಲ. ಈಗ ಎಷ್ಟೋ ಜನರಿಗೆ ಆ ಪದ್ಯದ ಭಾವವೂ ದಕ್ಕುವುದು ಕಷ್ಟ. ಅಂದಮೇಲೆ ನವಿಲೂರ ಮನೆಯಿಂದ ನುಡಿಯೊಂದ ತರುವ ಬಳೆಗಾರನ ಪರಿಚಯ ಇರುವುದು ಶಕ್ಯವೇ?

ಟೆಲಿಫೋನ್‌ನಲ್ಲೇ ಅಶರೀರವಾಣಿ ಕೇಳಿ ಪ್ರೇಮಕ್ಕೊಳಗಾಗುವ 'ಬೆಳದಿಂಗಳ ಬಾಲೆ'ಯ ಕಾಲ ಮುಗಿದು, 'ಟೆಲಿಫೋನ್ ಗೆಳತಿ ವೆಲ್‌ಕಮ್ ವೆಲ್‌ಕಮ್' ಎಂದು ಹಾಡುವ ಚಂದ್ರಮುಖಿ

## ಪ್ರೇಮ ತನ್ನ ಮೌಲ್ಯ ಕಳೆದಕೊಳ್ಳುತ್ತಿದೆ



ಇಂದು ಸಂವಹನ ಎನ್ನುವುದು ಅತ್ಯಂತ ಸುಲಭವಾಗಿದ್ದು, ನಾವು ಎಷ್ಟೇ ದೂರದಲ್ಲಿದ್ದರು ಮೊಬೈಲ್ ಮೂಲಕ ಬಹು ಬೇಗನೆ ಒಬ್ಬರಿಗೊಬ್ಬರು ತಲುಪುತ್ತಿದ್ದೇವೆ. ಯಾರೊಂದಿಗಾದರೂ ಸಂಪರ್ಕ ಸಾಧಿಸಬೇಕೆಂದರೆ ಫೇಸ್‌ಬುಕ್, ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಮ್ ಮೂಲಕ ಸಂವಹನ ನಡೆಸಬಹುದಾಗಿದೆ. ಆದರೆ ಈಗ ಈ ಸಾಮಾಜಿಕ ಜಾಲತಾಣಗಳಿಂದ ಸಂಬಂಧಗಳು ಸುಲಭ ರೀತಿಯಲ್ಲಿ ಹತ್ತಿರವಾಗುತ್ತಿದ್ದು ಪ್ರೇಮ, ಸ್ನೇಹ ಸಂಬಂಧಗಳು ಅಷ್ಟೇ ಬೇಗ ಹತ್ತಿರವಾಗುತ್ತಿವೆ ಹಾಗೂ ತಮ್ಮ ಮೌಲ್ಯವನ್ನು ಕಳೆದುಕೊಳ್ಳುತ್ತಿವೆ. ಈ ಸಾಮಾಜಿಕ ಜಾಲತಾಣಗಳಿಂದ ಎಷ್ಟೇ ದೂರದಲ್ಲಿದ್ದರು ವಿಡಿಯೊ ಕಾಲ್ ಮುಂತಾದವುಗಳಿಂದ ಸಂವಹನ ಸುಲಭವಾಗಿದೆ. ಆದರೆ ಮುಂಚೆ ಸಂಪರ್ಕ ಸಾಧನಗಳು ಅಷ್ಟಾಗಿ ಇಲ್ಲದೇ ಇರುವದರಿಂದ ಪತ್ರಕ್ಕಾಗಿ, ಒಂದು ದೂರವಾಣಿಯ ಸಂಪರ್ಕಕ್ಕಾಗಿ ಕಾಯಬೇಕಿತ್ತು. ಆಗಿನ ಪ್ರೇಮದ ಸೊಗಸೇ ಬೇರೆಯಾಗಿತ್ತು. ಆದರೆ ಇಂದು ಒಬ್ಬರಿಗೊಬ್ಬ ಅಪರಿಚಿತರು ಕೂಡ ಸುಲಭವಾಗಿ ಸಂಪರ್ಕ ಸಾಧಿಸಿ ಸ್ನೇಹಿತರಾಗಬಹುದು; ಹೆಚ್ಚಿನ ಒಡನಾಟದಿಂದ ಸಂಬಂಧ ಬೆಳೆಯಬಹುದು. ಆದರೆ ಒಬ್ಬರಿಗೊಬ್ಬರು ಹತ್ತಿರವಾಗುತ್ತಿರುವುದು ಇದೇ ಸಾಮಾಜಿಕ ಜಾಲತಾಣಗಳಿಂದಲೇ. ಆದರೆ ಇವುಗಳ ಅತಿಯಾದ ಬಳಕೆಯಿಂದ ಒಂದರ್ಥದಲ್ಲಿ ಮೊಬೈಲ್, ಫೇಸ್‌ಬುಕ್‌ನಿಂದ ಸಂಬಂಧಗಳ ಮೌಲ್ಯವು ಬಹುಬೇಗನೆ ಕಳೆದು ಹೋಗುತ್ತಿರುವುದು ಸತ್ಯ.

**ರಾಜೇಶ್ವರಿ ಲಕ್ಕಣ್ಣವರ**

ಪ್ರೇಮ